**ಅಧ್ಯಕ್ಷರ ಅಪ್ಪಣೆ ಮೇರೆಗೆ**

**3. ಸಚಿವರ ಹೇಳಿಕೆ :**

**ವಿಷಯ : ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗೆ ಮೀಸಲಾತಿ ಹಾಗೂ ರೋಟೇಷನ್ ರೂಲ್ಸ್ ಬಗ್ಗೆ ಉಚ್ಚ ನ್ಯಾಯಾಲಯ ನೀಡಿರುವ ತೀರ್ಪಿನ ಬಗ್ಗೆ.**

**ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಇಲಾಖೆ ಸಚಿವರು)** :– ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆಗೆ ಸಂಬಂಧಪಟ್ಟಂತೆ ಇರುವ ಮೀಸಲಾತಿ ಹಾಗೂ ರೊಟೇಷನ್ ರೂಲ್ಸ್ ಬಗ್ಗೆ ನಮ್ಮ ರಾಜ್ಯ ಉಚ್ಚ ನ್ಯಾಯಾಲಯದವರು ಇಂದು ಮುಂಜಾನೆ ಒಂದು ತೀರ್ಪನ್ನು ಕೊಟ್ಟಿದ್ದಾರೆ. ಇದು ನನಗೆ ತಕ್ಷಣ ತಿಳಿದ ಕೂಡಲೇ ನಾನು ನಿಮ್ಮ ಜೊತೆಗೆ ಆ ವಿಚಾರವನ್ನು ಮಾಹಿತಿಯನ್ನು ಹಂಚಿಕೆ ಮಾಡತಕ್ಕಂಥದ್ದು ನನ್ನ ಕರ್ತವ್ಯವಾಗಿದೆ. ಮತ್ತೆ ಈ ಸಭೆಯ ಎಲ್ಲಾ ಮಾನ್ಯ ಸದ್ಯರುಗಳ ಗಮನಕ್ಕೆ ಈ ಸ್ಟೇಟ್‌ಮೆಂಟ್ ತಂದು ಅವರ ಅಭಿಪ್ರಾಯ ಮತ್ತು ಅನಿಸಿಕೆ ಏನು ವ್ಯಕ್ತಪಡಿಸುತ್ತಾರೆ ಎಂಬುದನ್ನು ತಿಳಿದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಯವರು ಕೂಡು ತಿಳಿಸಿದ್ದಾರೆ. ಈ ಒಂದು ಹಿನ್ನೆಲೆಯಲ್ಲಿ ಇದನ್ನು ಇಲ್ಲಿ ಮಂಡಿಸುವುದಕ್ಕೆ ಸನ್ಮಾನ್ಯ ಸಭಾಧ್ಯಕ್ಷರ ಪರ್ಮಿಷನ್ ಕೇಳಿದ್ದೇನೆ. ಇದು ಬಹಳ ಮಹತ್ವವಾದ ವಿಚಾರವೆಂದು ತಾವೂ ಕೂಡ ಹೇಳುತ್ತೀರಿ. ನಾಲ್ಕು ಪ್ಯಾರಾ ಒಳಗೊಂಡಂಥ ಈ ಹೇಳಿಕೆಯನ್ನು ಸಭೆಯ ಮುಂದೆ ಪ್ಲೇಸ್ ಮಾಡುತ್ತೇನೆ. If you want to discuss, you can discuss it later.

**ಶ್ರೀ ಜಗದೀಶ್ ಶೆಟ್ಟರ್** :– ಮಾನ್ಯ ಸಚಿವರು ಸಭೆಯ ಮುಂದೆ ಮಂಡಿಸಿದ ಮೇಲೆ ನಾವು ಅದರ ಬಗ್ಗೆ ಮಾತನಾಡಬೇಕಾಗಿದೆ.

**ಶ್ರೀ ಹೆಚ್.ಕೆ. ಪಾಟೀಲ್** :– Not necessary now ಇದು ಹೈಕೋರ್ಟ್ ಜಡ್ಜಮೆಂಟ್ ಆಗಿದೆ.

**ಶ್ರೀ ಜಗದೀಶ್ ಶೆಟ್ಟರ್** :– ಹೈಕೋರ್ಟ್ ತೀರ್ಮಾನ ಏನು ಎಂಬುದು ನಮಗೆ ಗೊತ್ತಿದೆ.

**ಶ್ರೀ ಹೆಚ್.ಕೆ. ಪಾಟೀಲ್** :– ಇದರ ಬಗ್ಗೆ ತಾವು ಚರ್ಚೆ ಮಾಡಬಹುದು.

**ಶ್ರೀ ಜಗದೀಶ್ ಶೆಟ್ಟರ್** :– ಈಗಾಗಲೇ ಒಂದು ವಿಷಯದ ಬಗ್ಗೆ ಚರ್ಚೆ ನಡೆಯುತ್ತಿದೆ. ಇದರ ಮಧ್ಯೆ ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ವಿಷಯ ಡೈವರ್ಸ್ ಆಗುವುದಿಲ್ಲವೇ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :–** ಮಾನ್ಯ ಅಧ್ಯಕ್ಷರೆ, ಈಗಾಗಲೇ, ಚರ್ಚೆಯಾಗುತ್ತಿರುವ ವಿಷಯದ ಪ್ರಾಮುಖ್ಯತೆ ಕಡಿಮೆಯಾಗಬಾರದು. ಈ ವಿಷಯದ ಬಗ್ಗೆ ಇವತ್ತು ಇಲ್ಲಿ ಏನು ತೀರ್ಮಾನವಾಗುತ್ತದೆ ಎಂದು ರೈತರು ಕಾಯುತ್ತಿದ್ದಾರೆ.

**ಶ್ರೀ ಹೆಚ್.ಕೆ. ಪಾಟೀಲ್ :–** ಮಾನ್ಯ ಅಧ್ಯಕ್ಷರ ಮತ್ತು ತಮ್ಮಗಳ ವಿವೇಚನೆಗೆ ಇದನ್ನು ಬಿಡುತ್ತೇನೆ. ಹೈಕೋರ್ಟ್ ಒಂದು ಮಹತ್ವವಾದ ತೀರ್ಪನ್ನು ಕೊಟ್ಟಿದೆ. ಇದನ್ನು ತಮ್ಮಗಳ ಮುಂದೆ ಹಂಚಿಕೆ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದಿದ್ದೇನೆ.

**ಅಧ್ಯಕ್ಷರು :–** ಮಾನ್ಯ ಸಚಿವರು ಈಗ ಸ್ಟೇಟ್‌ಮೆಂಟ್ ಮಾಡಲಿ. ಅನಂತರ ಅವಕಾಶ ಇದ್ದರೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಮಾನ್ಯ ಸಚಿವರು ಸ್ಟೇಟ್‌ಮೆಂಟ್ ಮಾಡಿದ ಮೇಲೆ ಮಾನ್ಯ ವಿರೋಧಪಕ್ಷದ ನಾಯಕರು ಈಗಾಗಲೇ ಪ್ರಸ್ತಾಪ ಮಾಡಿರತಕ್ಕಂಥ ವಿಷಯದ ಮೇಲಿನ ಚರ್ಚೆಯನ್ನು ಅವರು ಮುಂದುವರಿಸುತ್ತಾರೆ. ಮೊದಲು ಮಾನ್ಯ ಸಚಿವರು ಸ್ಟೇಟ್‌ಮೆಂಟ್ ಮಾಡಲಿ. It is also an important subject.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :–** ಮಾನ್ಯ ಅಧ್ಯಕ್ಷರೆ, ಇವತ್ತು ಸಂಜೆ ಮೂರ್ನಾಲ್ಕು ಗಂಟೆಗೆ ಎಲ್ಲಾ ಸೊಸೈಟಿಗಳು ಬಾಗಿಲು ಹಾಕುತ್ತಾರೆ. ಆದ್ದರಿಂದ ಇಷ್ಟರೊಳಗೆ ಇಲ್ಲಿ ಏನು ತೀರ್ಮಾನ ಆಗುತ್ತದೆ ಎನ್ನತಕ್ಕಂಥದ್ದನ್ನು ರೈತರು ಕಾಯುತ್ತಿದ್ದಾರೆ.

**ಅಧ್ಯಕ್ಷರು :–** ಅವರು ಸ್ಟೇಟ್‌ಮೆಂಟ್ ಮಾಡಿದ ಮೇಲೆ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಕೊಡುತ್ತೇನೆ.

**ಶ್ರೀ ಆರ್. ಅಶೋಕ್ :–** ಇವತ್ತು ಕೊನೆಯ ದಿವಸವಾಗಿದೆ. ಆದ್ದರಿಂದ ಈ ವಿಷಯ ಡೈಲೂಟ್ ಆಗಬಾರದು.

**ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) :–** ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್ ಇರಬಹುದು. ಇವರು ಏನು ಆಜ್ಞೆ ಅಥವಾ ತೀರ್ಪು ಕೊಟ್ಟಿದ್ದಾರೆಂಬುದು ಮೀಡಿಯಾಗಳ ಮೂಲಕ ಜಗತ್ತಿನ ಎಲ್ಲಾ ಜನತೆಗೆ ಗೊತ್ತಾಗುವುದಕ್ಕೆ ಏನೂ ತೊಂದರೆಯಿಲ್ಲ. ಮಾನ್ಯ ಕಾನೂನು ಸಚಿವರು ಇದಕ್ಕೆ ಸಂಬಂಧಪಟ್ಟಂತೆ ಹೇಳಿಕೆ ಕೊಡುತ್ತೇನೆಂದು ಹೇಳುತ್ತಿದ್ದಾರೆ. ಆದರೆ, ಇದು ಬಹಳ ಗಂಭೀರವಾದ ವಿಷಯವಾಗಿದೆ. ಮೀಸಲಾತಿ ವಿಷಯಕ್ಕೆ ಸಂಬಂಧಪಟ್ಟಂತೆ ಏಕೆ ತಡವಾಯಿತು ಈ ರೀತಿಯ ಗೊಂದಲ ಏತಕ್ಕಾಗಿ ಆಗಿದೆ ಎಂಬ ಮಹತ್ವದ ವಿಚಾರದ ಬಗ್ಗೆ ಚರ್ಚೆ ಮಾಡಿ ಮತ್ತೊಮ್ಮೆ ಈ ರೀತಿಯಾದ ಪರಿಸ್ಥಿತಿ ಬಾರದ ಹಾಗೆ ಎಚ್ಚರ ವಹಿಸಿ ಮಾತನಾಡಬೇಕಾಗಿದೆ. ನೀವು ಈಗ ಸ್ಟೇಟ್‌ಮೆಂಟ್ ಮಾಡಿದ ಮೇಲೆ ನಾವು ಮಾಡನಾಡಲೇ ಬೇಕಾಗುತ್ತದೆ. ಆದರೆ, ಈಗ ನಾವು ಪ್ರಮುಖವಾದಂಥ ವಿಷಯದ ಬಗ್ಗೆ ಮಾತನಾಡಬೇಕಾಗಿದೆ.

**ಅಧ್ಯಕ್ಷರು :–** ಮಾನ್ಯ ಸಚಿವರು ಮೊದಲು ಸ್ಟೇಟ್‌ಮೆಂಟ್ ಮಾಡಲಿ, ಆನಂತರ, ಈ ವಿಷಯದ ಬಗ್ಗೆ ತಾವು ಚರ್ಚೆ ಮುಂದುವರಿಸಿ ಮತ್ತೆ ಆನಂತರ, ಸ್ಟೇಟ್‌ಮೆಂಟ್ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಹೆಚ್. ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳ ಸರದಿ (ರೊಟೇಷನ್) ಆಧಾರಿತ ಮೀಸಲಾತಿ ನಿಮಯಗಳ ಸಿಂಧುತ್ವವನ್ನು ಪ್ರಶ್ನಿಸಿದ ರಿಟ್ ಅರ್ಜಿಗಳನ್ನು ಮಾನ್ಯ ಮಾಡಲಾಗಿದೆ. ರೊಟೇಷನ್ ನಿಮಯಗಳನ್ನು ಹೈಕೋರ್ಟ್ ತಳ್ಳಿ ಹಾಕಿದೆ ವಜಾಗೊಳಿಸಿದೆ.

ಈ ನಿಯಮಗಳನ್ವಯ ಮೀಸಲಾತಿ ನಿಗದಿಪಡಿಸಿ ಹೊರಡಿಸಲಾದ ಅಧಿಸೂಚನೆಗಳನ್ನು ಸಹ ರಾಜ್ಯ ಉಚ್ಛ ನ್ಯಾಯಾಲಯ ವಜಾಗೊಳಿಸಿದೆ. ಕ್ಷೇತ್ರಗಳ ಪುನರ್‌ವಿಂಗಡಣೆ ಪ್ರಶ್ನಿಸಿದ ರಿಟ್ ಅರ್ಜಿಗಳನ್ನು ಹೈಕೋರ್ಟ್ ತಳ್ಳಿಹಾಕಿದೆ.

ರಾಜ್ಯ ಉಚ್ಛ ನ್ಯಾಯಾಲಯವು ಸರದಿ (ರೊಟೇಷನ್) ನಿಯಮಗಳನ್ನು ಮತ್ತೊಮ್ಮೆ ರೂಪಿಸಿ ಅದಾದನಂತರ ಮೀಸಲಾತಿ ಅಧಿಸೂಚನೆಗಳನ್ನು ಹೊರಡಿಸಿ ನಂತರ ಚುನಾವಣೆಗಳನ್ನು ನಡೆಸಲು ರಾಜ್ಯ ಸರಕಾರಕ್ಕೆ ನಿರ್ದೇಶನ ನೀಡಿದೆ.

ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993 ರನ್ವಯ 27 ಜಿಲ್ಲಾಪಂಚಾಯತಿ, 175 ತಾಲ್ಲೂಕು ಪಂಚಾಯಿತಿಗಳಿಗೆ ಜೂನ್ 2000ದಲ್ಲಿ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಿದ್ದು, ಪ್ರಕರಣ 173 ಮತ್ತು 134ರನ್ವಯ ಕ್ರಮವಾಗಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳ ಸಾರ್ವತ್ರಿಕ ಚುನಾವಣೆ ನಂತರ ಚುನಾಯಿತರಾದ ಸದಸ್ಯರುಗಳ ಹುದ್ದೆಯು ಪ್ರಥಮ ಸಭೆಗೆ ನಿಗದಿಪಡಿಸಿದ ದಿನಾಂಕದಿಂದ 5 ವರ್ಷಗಳ ಅವಧಿಯಾಗಿದ್ದು, ಸದರಿ ಅವಧಿಯು ಜುಲೈ 2005 ರಂದು ಪೂರ್ಣಗೊಳ್ಳುತ್ತದೆ.

ಕರ್ನಾಟಕ ರಿಟ್ ಅರ್ಜಿ ಸಂಖ್ಯೆ 14946/2005ರಲ್ಲಿ ರಾಜ್ಯ ಚುನಾವಣಾ ಆಯುಕ್ತರಿಗೆ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಚುನಾವಣಾ ಪ್ರಕ್ರಿಯೆಯ ದಿನಾಂಕಗಳನ್ನು ಘೋಷಿಸಬಾರದೆಂದು ನಿರ್ದೇಶನ ನೀಡಿತ್ತು.

ಈ ತೀರ್ಪಿನ ಪೂರ್ಣ ಪಾಠದ ಪ್ರತಿಯನ್ನು ರಾಜ್ಯ ಸರಕಾರವು ನಿರೀಕ್ಷಿಸುತ್ತಿದ್ದು, ಪ್ರತಿ ಲಭ್ಯವಾದ ನಂತರ ಕಾನೂನು ಪಂಡಿತರು ಹಾಗೂ ಸಂಬಂಧಪಟ್ಟವರೊಂದಿಗೆ ಸಮಾಲೋಚಿಸಿ ರಾಜ್ಯ ಸಚಿವ ಸಂಪುಟವು ಸೂಕ್ತ ನಿರ್ಣಯವನ್ನು ಕೈಗೊಳ್ಳಲಿದೆ.

ಈ ಎಲ್ಲಾ ಮಾಹಿತಿಗಳನ್ನು ಒಳಗೊಂಡಂಥ ಒಂದು ವಿವರವನ್ನು ಸಭೆಯ ಮುಂದೆ ಮಂಡಿಸಿದ್ದೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ :–** ಮಾನ್ಯ ಅಧ್ಯಕ್ಷರೆ, Is this not shame on the part of the Government? ಈ ತರಹ ಒಂದು Decision of the Court ಆದಾಗ, ಮಾಹಿತಿ ಕೊಟ್ಟಿದ್ದೇವೆಂದು ಹೇಳಿ ಅದನ್ನು ತಾವು ಇಲ್ಲಿ ಪ್ಲೇಸ್ ಮಾಡಿದರೆ ಸಾಕೆ? ಅವರು ಹೇಳಿಕೆ ನೀಡಿದ ಮೇಲೆ ಅದರ ಮೇಲೆ ಚರ್ಚೆ ಮಾಡಬೇಕಾಗುತ್ತದೆ. ರೋಸ್ಟರ್ ಪದ್ಧತಿಯನ್ನು ಸರಿಯಾಗಿ ಫಾಲೋ ಮಾಡಿಲ್ಲ.

**ಶ್ರೀ ಹೆಚ್.ಕೆ. ಪಾಟೀಲ್ :–** ಇದರ ಬಗ್ಗೆ ಚರ್ಚೆ ಬೇಡವೆಂದು ಯಾರು ಹೇಳಿದರು? Is it not the duty of the Government to bring it to the notice of the house.

**ಶ್ರೀ ಜೆ.ಸಿ. ಮಾಧುಸ್ವಾಮಿ :–** ಇದು It is your duty. ಚರ್ಚೆಗೆ ಅವಕಾಶ ಬೇಕೆಂದು ನಾವು ಕೇಳುತ್ತಿದ್ದೇವೆ. ಈ ವಿಷಯದ ಬಗ್ಗೆ ಮಾತನಾಡತಕ್ಕಂಥದ್ದು ಬಹಳ ಇದೆ. ತಾವು ಮಾಡಿರುವ ಎಲ್ಲಾ ವಿಷಯಗಳೂ ಹೈಕೋರ್ಟ್‌ನಲ್ಲಿ ಚರ್ಚೆ ಆಗಿದೆ. ಅದು ಇಲ್ಲಿಗೆ ಬರಲಿ ಅನಂತರ ಅದರ ಮೇಲೆ ಚರ್ಚೆ ಮಾಡೋಣವೆಂದು ನಾವು ಇದ್ದೆವು. ಆದರೆ ಈಗ ಸ್ಟೇಟ್‌ಮೆಂಟ್ ಮಾಡಿ ಮನೆಗೆ ಹೋಗಬೇಕೆಂದು ತಾವು ಮಾಡಿದ್ದೀರಾ?

**ಶ್ರೀ ಹೆಚ್.ಕೆ. ಪಾಟೀಲ್ :–** ಚರ್ಚೆ ಮಾಡುವುದು ಬೇಡವೆಂದು ಯಾರು ಹೇಳಿದರು? He is doing duty as a shame?

**ಅಧ್ಯಕ್ಷರು :–** ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡುತ್ತೇನೆ.

**ಶ್ರೀ ಜೆ. ಸಿ. ಮಾಧುಸ್ವಾಮಿ :–** ಮಾನ್ಯ ಅಧ್ಯಕ್ಷರೆ, ಇದೊಂದು ಕೇವಲ ಸ್ಟೇಟ್‌ಮೆಂಟ್ ಎಂದು ಹೇಳತಕ್ಕಂಥದ್ದು ಒಂದು ಮಾತೇ ?Strictures are passed against the Government.

**ಶ್ರೀ ಹೆಚ್.ಕೆ. ಪಾಟೀಲ್ :–** ಮಾನ್ಯ ಮಾಧುಸ್ವಾಮಿಯವರೆ, ನಾನು ಕೂಡ ಸಂಸದೀಯ ವವಸ್ಥೆಯಲ್ಲಿದ್ದೇನೆ. ಮತ್ತೆ ನಾನು ನನ್ನ ಕರ್ತವ್ಯ ಪಾಲನೆ ಮಾಡಬೇಕಾಗಿದೆ. ನಿಮಗೆ ಬೇಕೆಂದಾಗ ಮಾತ್ರ ಮಾಹಿತಿ ಕೊಡಬೇಕೆಂದು ನಾನು ಇಲ್ಲಿ ಇಲ್ಲ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಶ್ಯಕತೆ ಇದ್ದರೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಈಗಲೂ ಕೂಡ ನೀವು ಮಾನ್ಯ ಅಧ್ಯಕ್ಷರನ್ನು ಕೇಳಬಹುದು.

**ಶ್ರೀ ಜೆ.ಸಿ. ಮಾಧುಸ್ವಾಮಿ :–** ಹಾಗಾದರೆ ಇದರ ಬಗ್ಗೆ ಮೊದಲು ಚರ್ಚೆ ಆಗಲಿ.

**(ಗೊಂದಲ)**

**ಶ್ರೀ ಜಗದೀಶ್ ಶೆಟ್ಟರ್ :–** ಇದರ ಬಗ್ಗೆ ಸಾಕಷ್ಟು ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇದೆ. ಮತ್ತೇ ಈಗಾಗಲೇ ಅವರ ಅವಧಿ ಮುಗಿದಿದೆ.

**(ಗೊಂದಲ)**

**ಅಧ್ಯಕ್ಷರು :–** ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಮತ್ತು ಕ್ಲಾರಿಫಿಕೇಶನ್‌ಗೂ ಕೂಡ ಅವಕಾಶ ಮಾಡಿಕೊಡುತ್ತೇನೆ. ಮೊದಲು ಮಾನ್ಯ ಯಡಿಯೂರಪ್ಪನವರು ಪ್ರಸ್ತಾಪ ಮಾಡಿರತಕ್ಕಂಥ ವಿಚಾರ ಮುಗಿಯಲಿ. ಅನಂತರ ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಒದಗಿಸಿಕೊಡುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್ :–** ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆ ಮುಂದಕ್ಕೆ ಹೋಗಿರುವುದರಿಂದ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷರು ಮತ್ತು ಸದಸ್ಯರಲ್ಲಿ ಒಂದು ರೀತಿಯ ವಾಕ್ಯುಮ್ ಕ್ರಿಯೇಟ್ ಆಗಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರದ ಸ್ಟ್ಯಾಂಡ್ ಏನಿದೆ ಎಂಬುದನ್ನು ತಿಳಿಸಬೇಕು. ಒಂದು ಕಡೆ, ಆಡಳಿತಾಧಿಕಾರಿಯನ್ನು ನೇಮಕ ಮಾಡಲಾಗುತ್ತದೆಂದು ಹೇಳುತ್ತೀರಿ.

**ಶ್ರೀ ಜೆ.ಸಿ. ಮಾಧುಸ್ವಾಮಿ :–** ಮಾನ್ಯ ಅಧ್ಯಕ್ಷರೆ, ಈಗಾಗಲೇ ನಿಲುವಳಿ ಸೂಚನೆ ಮೂವ್ ಆಗಿದ್ದು, ಇದ್ದ ಬಗ್ಗೆ ಚರ್ಚೆ ಪ್ರಾರಂಭ ಕೂಡ ಆಗಿದೆ. ಇದರ ಮಧ್ಯೆ ಇದನ್ನು ಚರ್ಚೆಗೆ ತೆಗೆದುಕೊಂಡರೆ ಏನು ಗತಿ?

**ಶ್ರೀ ಜಗದೀಶ್ ಶೆಟ್ಟರ್ :–** ಮತ್ತೆ ಇರತಕ್ಕಂತ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನು ಮುಂದುವರಿಸುತ್ತೀರಾ ಅಥವಾ ಇಲ್ಲವೆ ಎನ್ನತಕ್ಕಂಥದ್ದನ್ನು ಸರ್ಕಾರ ಹೇಳಬೇಕು.

**ಅಧ್ಯಕ್ಷರು :–** ಇದರ ಬಗ್ಗೆ ಚರ್ಚೆ ಮಾಡಲು ನಾನು ಅವಕಾಶ ಕೊಡುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್ :–** ಮಾನ್ಯ ಸಚಿವರು ಹೇಳಿಕೆಯನ್ನು ಕೊಡುವುದಕ್ಕಿಂತ ಮುಂಚಿತವಾಗಿ ನಮಗೆ ಚರ್ಚೆಗೆ ಅವಕಾಶ ಇರುವ ರೀತಿಯಲ್ಲಿ ಮಾಡಿದರೆ ನಮ್ಮದೇನೂ ಅಡ್ಡಿಯಿಲ್ಲ. ಆದರೆ, ಈಗಾಗಲೇ ನಿಲುವಳಿ ಸೂಚನೆ ಬಗ್ಗೆ ಚರ್ಚೆ ನಡೆಯುತ್ತಿದೆ. ಆದರೆ, ಇದನ್ನು ಬ್ರೇಕ್ ಮಾಡಿ ಈಗ ಸ್ಟೇಟ್‌ಮೆಂಟ್ ಮಾಡಿ ಒಂದು ಗಂಟೆ ಬಿಟ್ಟು ಇದರ ಬಗ್ಗೆ ಚರ್ಚೆ ಮಾಡುವುದರಲ್ಲಿ ಏನು ಅರ್ಥ ಇದೆ ಎನ್ನತಕ್ಕಂಥದ್ದು ನನಗೆ ಅರ್ಥವಾಗುತ್ತಿಲ್ಲ. ಇನ್ನೊಂದು ಗಂಟೆ ಬಿಟ್ಟು ಈ ಸ್ಟೇಟ್‌ಮೆಂಟ್ ಮಾಡಿದರೆ ಏನು ಗಂಟು ಹೋಗುತ್ತದೆ?

**ಶ್ರೀ ಹೆಚ್.ಕೆ. ಪಾಟೀಲ್** :– ಇಲ್ಲಿ ನಿಮ್ಮದು ಅಥವಾ ಯಾರದ್ದೂ ಗಂಟು ಹೋಗುವುದಿಲ್ಲ.

**ಅಧ್ಯಕ್ಷರು** :– ಈಗ ಈ ವಿಷಯ ಬೇಡ.

**ಶ್ರೀ ಹೆಚ್.ಕೆ. ಪಾಟೀಲ್** :– ಇಂತಹ ಮಹತ್ವದ ಮಾಹಿತಿ ಬಂದಾಗ ಈ ಸದನಕ್ಕೆ ಹಂಚಿಕೆ ಮಾಡಿಕೊಳ್ಳುವುದು ಸರ್ಕಾರದ ಕರ್ತವ್ಯವಾಗಿದೆ. ಇನ್ನೊಂದು ಎರಡು ನಿಮಿಷ ಬಿಟ್ಟು ಅಂದರೆ ನೀವು ರೈಸ್ ಮಾಡಿದ ಮೇಲೆ ನಾವು ಇದನ್ನು ಹೇಳಬೇಕಾಗಿತ್ತೇ?

**ಶ್ರೀ ಜಗದೀಶ್ ಶೆಟ್ಟರ್** :– ಹಾಗಾದರೆ ನಾವು ಆಗಲೇ ಪ್ರಸ್ತಾಪ ಮಾಡಬೇಕಾಗಿತ್ತಲ್ಲವೆ?

**ಶ್ರೀ ಜೆ.ಸಿ. ಮಾಧುಸ್ವಾಮಿ** :– ಮಾನ್ಯ ಅಧ್ಯಕ್ಷರೆ, ಇದೊಂದು ಗಹನವಾದ ವಿಷಯವಾಗಿದೆ. ಯಾವುದೋ ಒಂದು ವಿಷಯದ ಬಗ್ಗೆ ಸರ್ಕಾರ ಹೇಳಿಕೆ ಕೊಡುವಾಗ ಮಾನ್ಯ ಮಂತ್ರಿಯವರು ಎದ್ದು ಮಧ್ಯದಲ್ಲಿ ಪ್ರವೇಶ ಮಾಡಿ ನಾನು ಹೇಳಿಕೆ ಕೊಡುತ್ತೇನೆಂದು ಹೇಳತಕ್ಕಂಥದ್ದು ಬೇರೆ. ಸರ್ಕಾರದ ವಿರುದ್ಧವಾಗಿ ಸ್ಟ್ರಿಕ್ಚರ್ಸ್ ಪಾಸ್ ಮಾಡಿ ಒಂದು ಜಡ್ಜ್‌ಮೆಂಟ್ ಆಗಿರತಕ್ಕಂಥದ್ದನ್ನು ವಿಧಾನ ಸಭೆಯಲ್ಲಿ ತಿಳಿಸತಕ್ಕಂಥ ರೀತಿಯೇ ಬೇರೆ.

**ಶ್ರೀ ಆರ್.ವಿ. ದೇಶಪಾಂಡೆ** :– ಮಾನ್ಯ ಅಧ್ಯಕ್ಷರೆ, ಮೀಸಲಾತಿಯನ್ನು ಸರ್ಕಾರ ಮಾಡಿಲ್ಲ. ಇದನ್ನು ಚುನಾವಣಾ ಆಯೋಗ ಮಾಡಿದೆ. Delimitation of the constituencies is done by Election Commission. Not by the Government. ಆದ್ದರಿಂದ ಸರ್ಕಾರದ ವಿರುದ್ಧ ಸ್ಟ್ರಿಕ್ಚರ್ಸ್ ಇಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ** :– ಚುನಾವಣಾ ಆಯೋಗದ ಪರವಾಗಿ ಅಡ್ವೋಕೇಟ್ ಜನರಲ್‌ರವರು ಇರಲಿಲ್ಲವೇ? ಅಡ್ವೋಕೇಟ್ ಜನರಲ್‌ರವರು ಕೋರ್ಟ್‌ಗೆ ಹೋಗಲಿಲ್ಲವೇ? ಚುನಾವಣಾ ಆಯೋಗವೇ ಕೋರ್ಟ್‌ಗೆ ಹೋಗಿ ವಾದ ಮಾಡಿತೆ? ಇಂಥ ಒಂದು ಗಹನವಾದ ವಿಷಯವನ್ನು ಯಾವುದೋ ಒಂದು ಮಾತಿನ ನಡುವೆ ಒಂದು ಮಹತ್ವವಾದ ಸ್ಟೇಟ್‌ಮೆಂಟ್ ಮಾಡುತ್ತೇವೆಂದು ಮಾಡಿ ಇಡೀ ವಿಷಯವನ್ನು ಮರ್ಜ್ ಮಾಡಿದರೆ ಹೇಗೆ?

**ಶ್ರೀ ಆರ್.ವಿ. ದೇಶಪಾಂಡೆ** :– ಯಾವ ವಿಷಯವನ್ನು ಡೈವರ್ಟ್ ಮಾಡಿಲ್ಲ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಹೇಳಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ವಿರೋಧಪಕ್ಷದ ನಾಯಕರುಗಳು ತಮ್ಮ ಅಭಿಪ್ರಾಯ ಹೇಳಬಹುದಾಗಿದೆ. ಬೇಕಾದರೆ ಇದರ ಬಗ್ಗೆ ಚರ್ಚೆ ಈಗಲೇ ಪ್ರಾರಂಭ ಮಾಡಲಿ. ಅದರಲ್ಲಿ ಏನು ತೊಂದರೆ ಇದೆ?

**ಶ್ರೀ ಜೆ.ಸಿ. ಮಾಧುಸ್ವಾಮಿ** :– ಹಾಗಾದರೆ, ಮಾನ್ಯ ಸಚಿವರು ಮಾಡಿರತಕ್ಕಂಥ ಸ್ಟೇಟ್‌ಮೆಂಟ್ ಮೇಲೆ ಮೊದಲು ಚರ್ಚೆಗೆ ತೆಗೆದುಕೊಳ್ಳಿ.

**ಅಧ್ಯಕ್ಷರು** :– ಈಗ ಏನಾಗಿದೆ ಎಂದರೆ, ಈಗಾಗಲೇ 69ರ ಅಡಿಯಲ್ಲಿ ಚರ್ಚೆ ಮಾಡಲು ಅವಕಾಶ ಕೊಟ್ಟಿದೆ. ಇದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಬಹಳಷ್ಟು ಮಾತನಾಡಿದ್ದಾರೆ. ಇನ್ನು ಸ್ವಲ್ಪ ಮಾತನಾಡಬಹುದು. ಮತ್ತೆ ನೀವೆಲ್ಲರೂ ಕೂಡ ಮಾತನಾಡಿದ ನಂತರ ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ** :– ಮಾನ್ಯ ಅಧ್ಯಕ್ಷರೆ, ಈಗ ಏನಾಗಿದೆ ಎಂದರೆ, ನೀವು ನಮಗೆ.

**ಶ್ರೀ ವಾಟಾಳ್ ನಾಗರಾಜ್** :– ಮಾನ್ಯ ಬಿ.ಎಸ್. ಯಡಿಯೂರಪ್ಪನವರೆ, ಒಂದು ನಿಮಿಷ ಈಗ ಸದನಕ್ಕೆ ಸಂಸದೀಯ ಸಚಿವರಾಗಿ ನ್ಯಾಯಾಲಯದ ಒಂದು ಪ್ರಮುಖವಾದಂಥ ವಿಚಾರ ಇದ್ದಾಗ ಅದನ್ನು ಇಲ್ಲಿ ತಿಳಿಸತಕ್ಕಂಥದ್ದು ಅವರ ಕರ್ತವ್ಯವಾಗಿದೆ. ಆದ್ದರಿಂದ ಇದನ್ನು ಇಲ್ಲವೆಂದು ತಿಳಿಸುವುದಕ್ಕೆ ಸಾಧ್ಯವಿಲ್ಲ. ಆದರೆ, ಇದನ್ನು ಮಾಡುವುದಕ್ಕಿಂತ ಮುಂಚೆ ಇದರ ಬಗ್ಗೆ ಚರ್ಚೆಯನ್ನು ಯಾವ ರೀತಿಯಾಗಿ ತರಬೇಕು ಅಥವಾ ಬೇಡವೋ ಎನ್ನತಕ್ಕಂಥದನ್ನು ಮೊದಲು ಹೇಳಿ. ಈಗ ನೀವು ಇಲ್ಲಿ ತಂದ ಕೂಡಲೇ ಇದನ್ನು ನಾವು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಸಂಸದೀಯ ವ್ಯವಸ್ಥೆಯಲ್ಲಿ ಇಂತಹ ಪ್ರಮುಖವಾದಂಥ ವಿಚಾರ ನ್ಯಾಯಾಲಯದಿಂದ ಬಂದಾಗ ಅದನ್ನು ತಾವು ಇಲ್ಲಿ ಸದನ ನಡೆಯುವಾಗ ತಿಳಿಸಬೇಕು. ಈಗ ತಾವು ಇದನ್ನು ತಿಳಿಸಿದ್ದೀರಿ. ಎರಡನೇಯದಾಗಿ ಈಗ ಅಸ್ತಿತ್ವದಲ್ಲಿರುವ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ನವರು ತಮಗೊಂದು ಮನವಿ ಕೊಟ್ಟು, ನಮ್ಮನ್ನೇ ಮುಂದುವರಿಸಿ ಆಡಳಿತಾಧಿಕಾರಿಗಳನ್ನು ನೇಮಕ ಮಾಡಬಾರದೆಂದು ಹೇಳಿದ್ದಾರೆ. ಆಡಳಿತಾಧಿಕಾರಿಗಳನ್ನು ನೇಮಕ ಮಾಡುವುದರಿಂದ ಪ್ರಜಾತಂತ್ರ ವ್ಯವಸ್ಥೆಗೆ ಅಪಾಯಕಾರಿ ಬೆಳವಣಿಗೆ ಇದೆ ಎಂದು. ಆದ್ದರಿಂದ ಈಗ ಇರತಕ್ಕಂಥ ಜಿಲ್ಲಾ ಪಂಚಾಯತ್ ಅಧ್ಯಕ್ಷರ ಮತ್ತು ಉಪಾಧ್ಯಕ್ಷರುಗಳನ್ನು ಮುಂದುವರಿಸಿ. ಅಧಿಕಾರಿಗಳನ್ನು ಇಟ್ಟುಕೊಳ್ಳತಕ್ಕಂಥದ್ದು ಒಳ್ಳೆಯ ಸೂಚನೆಯಲ್ಲ. ಅಧಿಕಾರಿಗಳು ಯಾವುದೇ ಸಂದರ್ಭದಲ್ಲಿ ಒಳ್ಳೆಯದಾಗಿ ನಡೆದುಕೊಂಡಿಲ್ಲ.

**(ಗೊಂದಲ)**

**ಶ್ರೀ ಜೆ.ಸಿ. ಮಾಧುಸ್ವಾಮಿ** :– ತಾವು ಏನು ಈ ರೀತಿ ಹೇಳುತ್ತಿದ್ದೀರಿ?

**ಶ್ರೀ ಕೆ. ಶ್ರೀನಿವಾಸಗೌಡ** :– ಮಾನ್ಯ ಅಧ್ಯಕ್ಷರೆ, ಇದಕ್ಕೆ ನಮ್ಮ ವಿರೋಧ ಕೂಡ ಇಲ್ಲ.

(ಗೊಂದಲ)

**ಶ್ರೀ ವಾಟಾಳ್ ನಾಗರಾಜ್** :– ನನ್ನ ಅನಿಸಿಕೆ ಏನೆಂದರೆ, ಬೇಗ ಚುನಾವಣೆ ಮಾಡಲಿ ಇದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಚುನಾವಣೆ ಬೇಗ ನಡೆಯಲಿ, ಚುನಾವಣೆಯ ದಿನಾಂಕವನ್ನು ತಕ್ಷಣವೇ ನಿಗದಿ ಮಾಡಿ. ಮತ್ತೆ ನ್ಯಾಯಾಲಯಕ್ಕೆ ಏನೇನು ಕೊಡಬೇಕೆಂದು ಮತ್ತು ಅವರು ಏನೇನು ಕೇಳಿದ್ದಾರೆ ಅವೆಲ್ಲವನ್ನೂ ಒದಗಿಸಿಕೊಡಿ. ಮತ್ತೆ ತಕ್ಷಣವೇ ಚುನಾವಣೆ ನಡೆಸಿ.

**ಶ್ರೀ ಜೆ.ಸಿ. ಮಾಧುಸ್ವಾಮಿ** :– ಹಾಲಿ ಇರತಕ್ಕಂಥವರನ್ನೇ ಮುಂದುವರಿಸುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ.

**ಶ್ರೀ ಬಿ.ಎಸ್. ಯಡಿಯೂರಪ್ಪ** :– ಮಾನ್ಯ ಅಧ್ಯಕ್ಷರೆ, ತಾವು ಏನೊಂದು ತೀರ್ಮ ಅಥವಾ ಆದೇಶ ಕೊಡುತ್ತೀರಿ, ಅದಕ್ಕೆ ತಲೆಬಾಗುವಂಥದ್ದು ನಮ್ಮ ಸತ್ಸಂಪ್ರದಾಯ : ಆ ರೀತಿ ನಾವು ನಡೆದುಕೊಳ್ಳುತ್ತೇವೆ. ಇದುವರೆಗೆ ನಡೆದುಕೊಂಡು ಬಂದಿರತಕ್ಕಂಥ ಪದ್ಧತಿ ಏನೆಂದರೆ, ನಿಲುವಳಿ ಸೂಚನೆಯ ಮೇಲೆ ಚರ್ಚೆ ಆಗತಕ್ಕಂಥ ಸಂದರ್ಭದಲ್ಲಿ ನಿಮ್ಮ ಮನವೊಲಿಸುವುದಕ್ಕೆ ಏನೇನು ಪ್ರಯತ್ನ ಮಾಡುತ್ತೇವೆ ಅದನ್ನು ಮಾಡಿದ ಮೇಲೆ ನೀವು ಯಾವ ರೀತಿಯಾದ ತೀರ್ಮ ಕೊಟ್ಟರೂ ಕೂಡ ಅದಕ್ಕೆ ನಾವು ತಲೆಬಾಗುತ್ತೇವೆ. ಆದರೆ ನಾವು ಇನ್ನೂ ಚರ್ಚೆ ಪ್ರಾರಂಭ ಮಾಡುತ್ತಿರುವಾಗಲೇ ನಿಲುವಳಿ ಸೂಚನೆಯನ್ನು ಕನ್ವರ್ಟ್ ಮಾಡಿದ್ದೀರಿ. ಇದನ್ನೂ ಕೂಡ ನಾವು ಒಪ್ಪಿಕೊಳ್ಳುತ್ತೇವೆ. ಆದರೆ, ಇದರ ಗಂಭೀರತೆ ಕಡಿಮೆಯಾಗುತ್ತದೆ ಎನ್ನತಕ್ಕಂಥದ್ದು ನಮ್ಮ ಭಾವನೆ. ನೀವು ಇದರ ಬಗ್ಗೆ ತೀರ್ಮ ಕೊಟ್ಟ ಮೇಲೆ ಅದಕ್ಕೆ ನಾವು ತಲೆಬಾಗುತ್ತೇವೆ. ಆದರೆ, ಇದರ ಮಧ್ಯೆ...

**ಶ್ರೀ ಜೆ.ಸಿ. ಮಾಧುಸ್ವಾಮಿ** :– ಸ್ವಾಮಿ, It is exactly the point. ಬಹಳ ಗಹನವಾದ ವಿಷಯಗಳ ಮಧ್ಯೆ ಇಂತಹ ವಿಷಯಗಳನ್ನು ತಂದರೆ ಯಾವುದಕ್ಕೆ ಪ್ರಾಮುಖ್ಯತೆ ಸಿಗುತ್ತದೆ ಹೇಳಿ. ಇಂತಹ ವಿಷಯಗಳನ್ನು ಸಭೆಯ ಮುಂದೆ ಇಡಬೇಕಾದರೆ, ಭಾಷಣ ಮುಗಿಯುವವರೆಗೆ ಆದರೂ ಕಾಯುವುದು ಬೇಡವೇ ಸರ್?